ಸಾಮ್ರಾಟ್. ಮನೆಗೆ ಹೋಗುವ ದಾರಿಯಲ್ಲಿ ಅವಳನ್ನ ಹೋಟೆಲಿಗೆ ಡ್ರಾಪ್ ಮಾಡಿಹೋಗೋಣ ಪ್ಲೀಸ್...' ಎಂಬ ಮಾತಿನ ಸಿದ್ಧಸರಕನ್ನು ಎಷ್ಟು ಸಾರಿ ಮನಸೊಳಗೇ ಮೆಲುಕಿಕೊಂಡಿದ್ದೆ! ಮಾ ಇಲ್ಲಾ ಪಾ ಆಡಿದ್ದಕ್ಕೆ ಏನೆಂತೆಲ್ಲ ವಾಪಸಾಡಬೇಕೆಂದು ಗಣಿಸಿ ಗುಣಿಸಿ ಲೆಕ್ಕ ಮಾಡಿಕೊಂಡಿದ್ದೆ! ಈ ನಾಟಕಕ್ಕೆ ತಕ್ಕುದಾಗಿ, ಇಸ್ಲಾಮಾಬಾದಿನಿಂದಲೇ ಕ್ರೆಡಿಟ್ ಕಾರ್ಡುಜ್ಜಿ ಉಜ್ಜಿ 'ಸಾಮ್ರಾಟ್' ಹೋಟೆಲಿನಲ್ಲೊಂದು ಕೋಣೆ ಕಾಯ್ದಿರಿಸಿದ್ದೆ. ಅಜೀಬಿನದೆಂದರೆ, ತನ್ವಿಯನ್ನು ಕಾರೇರಿಸಿಕೊಳ್ಳುವಾಗ ಪಾ ಒಮ್ಮೆಯೂ ಅವಳ ಬಗ್ಗೆ ಹೆಚ್ಚು ಕುತೂಹಲ ತಾಳಲಿಲ್ಲ. ಈ ಮೊದಲೇ ಯಾಕೆ ಹೇಳಿಲ್ಲವೆಂದು ಹುಬ್ಬೇರಿಸಲಿಲ್ಲ. ಇವಳಾರು, ಏನೆತ್ತವಂತ ಶಂಕಿಸಲಿಲ್ಲ. ಅವಳ ಸಲುವಾಗಿ ಹಾಯ್–ಹೆಲೋ ಆಡಲಿಲ್ಲ. ನಾನು ನಿರ್ದೇಶಿಸಿದ ಹಾಗೇ, ಸುಮ್ಮಗೆ ಕಾರನ್ನು 'ಹೋಟೆಲ್ ಸಾಮ್ರಾಟ್'ನ ಕಡೆಗೆ ಸ್ಟಿಯರಿಸಿದ್ದ. ತನ್ವಿಯನ್ನು ರೂಮೊಳಗಿರಗೊಟ್ಟು ನಾನು ಪುನಃ ಕಾರೇರಿದ ಮೇಲೂ, ಅವಳು ನಿಜಕ್ಕೂ ಯಾರೆಂದು ಕೇಳಿ ತಲೆಕೆಡಿಸಲಿಲ್ಲ. ನನಗೋ, ಒಳಗೇ ಅಳುಕಾಗತೊಡಗಿತ್ತು. ತನ್ವಿಯೆಡೆಗೆ ಮನಸ್ಸು ಜೀಕಿ ಜೀಕಿ ಜೀವ ಮಿಡುಕಿತ್ತು.

**'ಮುಟ್ಟಿದರೆ ಮುನಿ ಅಂತಾರಲ್ಲ ಹಾಗಾಗಿಬಿಟ್ಟಳು! ಎದುರಾದರೆ ಸಾಕು ಟಚ್ ಮಿ ನಾಟ್ ಅಂತ ಹಿಂಜರಿಯುವಳು!! ವಿಚಿತ್ರ ಅನಿಸತೊಡಗಿತು. ಸದಾ ಲೌಕಿಕದ ಎಲ್ಲದರಲ್ಲೂ ಇರುತ್ತಿದ್ದ ಹೆಣ್ಣು, ಹೀಗಾಗಿಬಿಟ್ಟರೆ? ಯಾವಾಗಲೂ ಧ್ಯಾನ. ಏನೋ ಮೆಡಿಟೇಶನ್ನು. ಓಂಕಾರ! ಏನು ಮಾಡಲಿ ಹೇಳು...'**

ಕಾರು ಮನೆಯೆಡೆಗಿನ ದಾರಿಯನ್ನು ತಕ್ಕೊಳ್ಳದೆ –ಹೈಗ್ರೌಂಡ್ಸ್‌ನತ್ತ ಹೊರಳಿದಾಗ, 'ಪಾ, ಎಲ್ಲಿ ಹೋಗುತಾ ಇದ್ದೀವಿ? ಇಲ್ಲಿ ಬಲಕ್ಕೆ ತಿರುಗಬೇಕಲ್ಲವಾ?' ಎಂದು ನಿಧಾನವಾಗಿ ಕೇಳಿದೆ. 'ಹಸಿವಾಗುತಿದೆ, ಸಿದ್ಧ್... ಲೆಟ್ಸ್ ಗ್ರ್ಯಾಬ್ ಸಮ್ತಿಂಗ್ ಅಂಡ್ ಗೋ...' ಅಂತಂದ. 'ವೆಸ್ಟೆಂಡ್'ನಲ್ಲಿನ ರೆಸ್ಟುರಾದಲ್ಲೊಂದು ಮೂಲೆಮೇಜಿನಲ್ಲಿ ಆಚೀಚೆ ನೆರೆಯುವಾಗ, ಅವನು ನಿಚ್ಚಳವಾಗಿ ಎದುರೇ ತೋರಿಬಂದು, ಮೋರೆ ನೋಡುತ್ತಲೇ ಏನೋ ತಾಳ ತಪ್ಪಿದೆಯಂತನ್ನಿಸಿತು. 'ನವ್ ದಟ್ ಯು ಆರ್ ಹಿಯರ್, ಐ ಹ್ಯಾವ್ ಟು ಡಿಸ್‌ಕ್ಲೋಸ್ ಸಮ್ತಿಂಗ್... ನಿನ್ನೊಡನೆ ಕೆಲವು ವಿಷಯಗಳನ್ನ ಹೇಳಿಕೊಳ್ಳಬೇಕು, ಸಿದ್ಧ್...' ಎಂದು ಮಾತು ಬಿಚ್ಚಿದ. ಅವನ ಹಸಿವು ಮತ್ತು ಊಟವೆರಡೂ ನೆಪವಷ್ಟೇ ಅಂತನ್ನಿಸಿತು, ಅವನು ಕೈಕೊಂಡ ಇಡೀ ನಾಟಕದ ನೇಪಥ್ಯದಲ್ಲಿ ಇನ್ನೊಂದೇ ವಾಸ್ತವವಿದ್ದಿತು. ನನ್ನ ಇಪ್ಪತ್ತೆಂಟರ ಬದುಕಿಗೆ ಹೊಸ ತಿರುವನ್ನೇ ಅದು ದಯಪಾಲಿಸಿತು. ಹಕೀಕತನ್ನೇ ತಿರುಚಿ ಇನ್ನೊಂದಾಗಿಸಿತು.

'ಸಿದ್ಧ್... ನೇರ ವಿಷಯಕ್ಕೆ ಬರುತೀನಿ. ನಾನೂ, ನಿನ್ನ ಅಮ್ಮನೂ ಡಿವೋರ್ಸ್ ಮಾಡುತಾ ಇದ್ದೀವಿ...' ಪಾ ಇನಿತೂ ಏರುತಗ್ಗಿರದೆ ಅನಾಮತ್ತು ಹೇಳಿಬಿಟ್ಟ. ಆಕಾಶವೇ ಹೌಹಾರಿ ಮೇಜಿಗಿಳಿದು ಬಂತು. ಅದರಾಚೆಗಿನ ದೇವರುಗಳು ತೊಪತೊಪನೆ ಉದುರಿ, ಅಂಗಾತವುರುಟಿದ ಸಾಯುವ ಮುಂದಲ ಜಿರಲೆಗಳಂತೆ ಒದ್ದಾಡತೊಡಗಿದವು.